ಕೈಗಾರಿಕೆಯವರಿಗೆ ಸರ್ಕಾರದ ವತಿಯಿಂದ ಸಾಲ

266 (145) ಶ್ರೀ ಅಂಜನ ಮೂರ್ತಿ (ನೆಲಮಂಗಲ):- ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಕೈಗಾರಿಕಾ ಮಾಲೀಕರಿಗೆ 1983 ರಿಂದ 1989 ರವರೆಗೆ ಸರ್ಕಾರದಿಂದ ಎಷ್ಟು ಹಣ ಸಾಲದ ರೂಪದಲ್ಲಿ ಕೊಡಲಾಗಿದೆ? (ಪೂರ್ಣವಾದ ಮಾಹಿತಿ ನೀಡುವುದು)

ಆ) ಹಾಗಿದ್ದಲ್ಲಿ ಎಷ್ಟು ಹಣ ಮರುಪಾವತಿ ಮಾಡಲಾಗಿದೆ?

ಇ) ಸಾಲ ಮರು ಪಾವತಿಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಈ) ಸಾಲ ಮರುಪಾವತಿಗೆ ಕೆಲವು ಅಧಿಕಾರಿಗಳು ಸಹ ಮಾಲೀಕರೊಂದಿಗೆ ಷಾಮೀಲಾಗಿ ಹಣ ವಸೂಲಾತಿಯಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು):-

ಅ) ರಾಜ್ಯದಲ್ಲಿ ಕೈಗಾರಿಕಾ ಘಟಕಗಳಿಗೆ 1983 ರಿಂದ 1989-90 ರವರೆಗೆ ಬಡ್ಡಿ ರಹಿತ ಅಭಿವೃದ್ಧಿ ಸಾಲವನ್ನು ಈ ಕೆಳಕಂಡಂತೆ ಕೊಡಲಾಗಿದೆ:-

ವರ್ಷ	ಮೊತ್ತ (ಲಕ್ಷಗಳಲ್ಲಿ)
1983-84	ರೂ. 624.00
1984-85	ರೂ. 1470.62
1985-86	ರೂ. 627.93
1986-87	ರೂ. 824.87
1987-88	ರೂ. 396.93
1988-89	ರೂ. 589.275
1989-90	ರೂ. 600.00
	ಒಟ್ಟು : ರೂ. 5133.625

ಆ) ಇದುವರೆವಿಗೂ ರೂ. 2,40,47,547.35 ಗಳ ಮರು ಪಾವತಿಯಾಗಿರುತ್ತದೆ.

ಇ) ಬಡ್ಡಿ ರಹಿತ ಅಭಿವೃದ್ಧಿ ಸಾಲವನ್ನು ರಾಜ್ಯದಲ್ಲಿ ಕೊಡುತ್ತಾ ಬಂದಿದ್ದು ಈ ಸಾಲವನ್ನು 8 ರಿಂದ 5 ವರ್ಷಗಳಾದ ಮೇಲೆ ಮರುಪಾವತಿ ಮಾಡಬೇಕಾಗಿದ್ದು ಈಗಾಗಲೇ ಕೆಲವು ಘಟಕಗಳು ಮರುಪಾವತಿ ಪ್ರಾರಂಭಿಸಿವೆ. ಮರುಪಾವತಿ ಮಾಡದೇ ಇರುವ ಘಟಕಗಳಿಂದ ಸಾಲವನ್ನು ವಸೂಲು ಮಾಡಲು ಇತ್ತೀಚೆಗೆ ಸರ್ಕಾರವು ದಿನಾಂಕ 6-9-1991 ರಂದು ಸರ್ಕಾರಿ ನೋಟಿಫಿಕೇಷನ್ ನಂ. ಸಿಐ 100 ಎಸ್. ಎಸ್.ಐ 90 ರ ಕಾಯಿದೆ ಐಟಂ(1)ಆಫ್ ಸಬ್-ಸೆಕ್ಷನ್(1) ಆಫ್ ಸೆಕ್ಷನ್ 3 ಆಫ್ ದಿ ಕರ್ನಾಟಕ ಪಬ್ಲಿಕ್ ಮನೀಸ್ (ರಿಕವರಿ ಆಫ್ ಡ್ಯೂಸ್) ಆಕ್ಟ್ 1979 (ಕರ್ನಾಟಕ ಆಕ್ಟ್ 16 ಆಫ್ 1980) ರಂತೆ ಮಹಾ ಕಾರ್ಯನಿರ್ವಾಹಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಇವರಿಗೆ ಅಧಿಕಾರ ಕೊಟ್ಟಿದ್ದು ವಸೂಲಿ ಕ್ರಮವನ್ನು ಈಗಾಗಲೇ ಕೈಗೊಳ್ಳಲಾಗುತ್ತಿದೆ. ಉದ್ದೇಶಪೂರ್ವಕವಾಗಿ ಕಂತುಗಳನ್ನು ಕಟ್ಟದೇ ಇರುವ ಘಟಕಗಳನ್ನು ಟರ್ಮಿನೇಷನ್ ಮಾಡಿ ಭೂ ಕಾಯಿದೆ ಅನ್ವಯ ಹಣ ವಸೂಲಿ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

ಈ) ಬಂದಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.